ಕರ್ನಾಟಕ ವಿಧಾನ ಸಬ

ಬೆಳಗಾವಿ ಅಧಿವೇಶನ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಬುಧವಾರ ದಿನಾಂಕ 21 ನೇ ಜನವರಿ 2009 ರಂದು

ಸದನವು ಬೆಳಗಾವಿಯ ಡಾ॥ ಬಿ.ಎಸ್.ಜೀರಿಗೆ ಹಾಲ್, ಜೆನ್ಎಂಸಿ ಮೆಮೋರಿಯಲ್ ಆಡಿಟೋರಿಯಮ್‌ನಲ್ಲಿ ಬೆಳಗಾವಿನಲ್ಲಿ ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ/ಶ್ರೀಮತಿ ಜಗದೀಶ್ ಶೆಟ್ಟರ್ ರವರು ಪೀಠವನ್ನು ಅಲಂಕರಿಸಿದ್ದರು.

ಸದನವು ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

ವಿಷಯ :- ಗಣಿಗಾರಿಕೆ ವಿಷಯದಲ್ಲಿ ಲೋಕಾಯುಕ್ತರ ವರದಿಗೆ ಬದಲಾಗಿ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳುತ್ತಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಈ ಹಿಂದೆ ನಿಲುವಳಿ ಸೂಚನೆ ಕಳುಹಿಸಿದುದನ್ನು ತಾವು ನಿಯಮ 69 ಕ್ಕೆ convert ಮಾಡಿದ್ದು ಅದು ಅಜೆಂಡಾದ 69 ರಲ್ಲಿ ಚರ್ಚೆಯಲ್ಲಿದ್ದು ಇವತ್ತು ಅದು ಮೂರನೇ ಸ್ಥಾನದಲ್ಲಿ ಇದೆ. ಆದುದರಿಂದ ಅದರ ಮಹತ್ವ ಕಳೆದುಕೊಂಡಿದೆ ಅದು ಒಂದು ಕಡೆ. ಎರಡನೆಯದು, ಇವತ್ತು ಪತ್ರಿಕೆಯಲ್ಲಿ ಒಂದು fresh report gives clean chit to mining company ಎಂದರೆ ಒಂದು ಹೊಸ ರಿಪೋರ್ಟ್ ಅನ್ನು ಸರ್ಕಾರದವರೇ ತರಿಸಿಕೊಂಡು ಈ ಹಿಂದೆ ಲೋಕಾಯುಕ್ತರು ಏನು ಕೊಟ್ಟಿದ್ದರು, ಆ ಲೋಕಾಯುಕ್ತರು ಕೊಟ್ಟಂಥ ಆ ವರದಿ ಸತ್ಯಕ್ಕೆ ದೂರವಾದುದು ಎನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ ಅಧಿಕಾರಿಗಳ ಮೂಲಕ

ಇವತ್ತು ಒಂದು ರಿಪೋರ್ಟ್ ಅನ್ನು ತರಿಸಿಕೊಂಡಿದ್ದಾರೆ. ಆ ವರದಿಯನ್ನು ತರಿಸಿಕೊಂಡು ಸಂತೋಷ್ ಹೆಗಡೆಯವರು ಏನು ರಿಪೋರ್ಟ್ ಕೊಟ್ಟಿದ್ದರು ಅದು ಮತ್ತು ಇವತ್ತು ಅರಣ್ಯ ಇಲಾಖೆಯವರು ಮಂಡಿಸಿದಂತಹ ವರದಿಯನ್ನು ನೋಡಿದಾಗ ಎರಡು contradictory ಇವೆ. ಇದರ ಅವಶ್ಯಕತೆ ಏನಿತ್ತು ಎನ್ನುವುದು ಬಹಳ ಮುಖ್ಯ. ಅಂದರೆ ಇದರಿಂದ Government intention ಏನಿದೆ ಎನ್ನುವುದು ಸ್ಪಷ್ಟವಾಗುತ್ತದೆ. ನೀವು ಲೋಕಾಯುಕ್ತರ ಮೇಲೆ ನಂಬಿಕೆ ಇಟ್ಟ ಮೇಲೆ ಲೋಕಾಯುಕ್ತ ವರದಿ ಸರಿಯಿದೆ ಎಂದು ಅನ್ನಿಸಿದ ಮೇಲೆ ಪುನ: ಇವತ್ತು ನಮ್ಮ Principal Chief Conservator of Forest ಯಾರು ಇವತ್ತು Administrative head ಆಗಿ ಸುಮಾರು ಮೂರ್ನಾಲ್ಕು ಪಿ.ಸಿ.ಎಫ್ ಮೇಲೆ ಅವರು ಕೆಲಸ ಮಾಡುತ್ತಿರುವವರು, ಅಂಥ ಒಬ್ಬ ವ್ಯಕ್ತಿ ಈಗಾಗಲೇ ಇದರ ಹಿಂದೆ involve ಆಗಿ ರಿಪೋರ್ಟ್ ಕೊಟ್ಟಿದ್ದರು. ಆದರೆ ದಿಲೀಪ್ ಕುಮಾರ್ ಎನ್ನುವಂಥ senior most of four Principal Chief Conservators of forest who was acting as administrative head of the department reportedly refused to sign the new report. Following this, the Government allegedly replaced him with P.C.C.F. S.Nagaraj and got it signed. ಇವರು ಯಾವಾಗ ಈ ವರದಿಗೆ ನಾನು ಸಹಿ ಮಾಡುವುದಿಲ್ಲ. ಈಗಾಗಲೇ ಅದು ಹಿಂದೆ ಲೋಕಾಯುಕ್ತರು ವರದಿ ಕೊಟ್ಟಿದ್ದಾರೆ. ಅದಕ್ಕಾಗಿ ಇದು ಸರಿ ಹೋಗುವುದಿಲ್ಲವೆನ್ನುವಂಥ ಮಾತನ್ನು ಹೇಳಿ ದಿಲೀಪ್ ಕುಮಾರ್‌ರವರು refuse ಮಾಡಿದರೆ ಅವರಿಗೆ transfer ಮಾಡಿ ಅವರ ಜಾಗದಲ್ಲಿ ಎಸ್.ನಾಗರಾಜ್ ಎನ್ನುವ ಒಬ್ಬ ಹೊಸಬರನ್ನು ನೇಮಿಸಿ ಅವರಿಂದ ಸಹಿ ಮಾಡಿಸಿಕೊಂಡು ಆ ವರದಿಯನ್ನು ಹೊರಗೆ ಹಾಕಿದ್ದಾರೆ ಎಂದು ಇದರಲ್ಲಿ ವರದಿಯಾಗಿದೆ. ಪತ್ರಿಕೆಯಲ್ಲಿಯೂ ಸಹ ಬಂದಿದೆ. Hindu ಪತ್ರಿಕೆಯಲ್ಲಿ ಮುಖ ಪುಟದಲ್ಲೇ ಇದೆ. ಅದಕ್ಕಾಗಿ ಈಗ ಚರ್ಚೆ ಮಾಡುವಂಥದ್ದು.

ಅಧ್ಯಕ್ಷರು :- ಈಗ ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ ಈ ವಿಷಯವನ್ನು 69 ರಲ್ಲಿ ಪ್ರಸ್ತಾಪ ಮಾಡುವಾಗ ಚರ್ಚೆ ಮಾಡಬಹುದು.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು:- ನಿಲುವಳಿ ಸೂಚನೆಯನ್ನು ತೆಗೆದುಕೊಂಡಾಗ ಪ್ರಸ್ತಾಪ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ :- ನಾನು ಅದಕ್ಕೆ ಹೇಳಿದೆ. ನಾನು ಅಜೆಂಡಾ ತೆಗೆದು ನೋಡಿದಾಗ ಅದು ನಿಯಮ 69 ರಲ್ಲಿ ಮೂರನೇ ಸ್ಥಾನದಲ್ಲಿದೆ. ಮೊದಲನೆಯದು ಯಾರೋ ಒಬ್ಬರು ನಮ್ಮ ಮಿತ್ರರು ನೀರಾವರಿ ಯೋಜನೆಗಳ ಬಗ್ಗೆ ಕೇಳಿರುವುದು ಇದೆ. ಎರಡನೆಯದು, ಕುಮಾರಸ್ವಾಮಿ ಮತ್ತು ರೇವಣ್ಣರವರು ಜೋಡಿಯಾಗಿ ಹಾಕಿದಂಥ 69 ರಲ್ಲಿ ಚರ್ಚೆಗೆ ಇದೆ. ಮೂರನೆಯ ಸ್ಥಾನದಲ್ಲಿ ನಮ್ಮ ವಿಷಯ ಬಂದಿದೆ.

ಅಧ್ಯಕ್ಷರು :- ನಿಮ್ಮ ವಿಷಯ reach ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ :- ಇದರ ಮಹತ್ವ ಹೋಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಏಕೆಂದರೆ ಏನು ತರಾತುರಿಯಲ್ಲಿ ಒಂದು ರಿಪೋರ್ಟ್ ತರಿಸಿಕೊಂಡು, ಲೋಕಾಯುಕ್ತರ ವರದಿ ಇದ್ದಾಗಲೂ ಸಹ ಅದನ್ನು negative ಮಾಡಬೇಕು ಅಥವಾ negate ಮಾಡಬೇಕು ಅನ್ನುವಂಥ ದೃಷ್ಟಿಯಿಂದ ನೀವು ಆಫೀಸರ್ ಅನ್ನು ನೇಮಕಾತಿ ಮಾಡಿ ಅವರ ಮೂಲಕ ರಿಪೋರ್ಟ್ ತೆಗೆದುಕೊಂಡು ಮತ್ತು ಯಾರು signature ಮಾಡುವುದಿಲ್ಲವೆನ್ನುತ್ತಾರೆ, ಅವರನ್ನು transfer ಮಾಡಿರುವ intention ಏನು ? ಇದು malafide intention, or good intention ಅಥವಾ ನಮ್ಮ ರಾಜ್ಯದ ಬೌಂಡರಿಯನ್ನು ಉಳಿಸಿಕೊಳ್ಳುವಂಥ ಆ ಗಡಿ ಪ್ರದೇಶವನ್ನು ಉಳಿಸಿಕೊಳ್ಳುವಂಥ ನಿಮ್ಮ ನಿಯತ್ತು ಏನು ಎನ್ನುವುದು ಗೊತ್ತಾಗಬೇಕಲ್ಲಾ? ಇದರಿಂದ ಏನು ಗೊತ್ತಾಗುತ್ತಿದೆ ಅಂದರೆ ಯಾರು encroach ಮಾಡಿದ್ದಾರೆ, ಯಾರು ನಮ್ಮ ಗಡಿ ಭಾಗದಲ್ಲಿರತಕ್ಕಂಥ mines ಇವತ್ತು illegal ಆಗಿ ಬೇರೆಯವರು ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಇವತ್ತು ಈ ವರದಿಯನ್ನು ತರಿಸಿಕೊಂಡು ತಾವು ಇಟ್ಟುಕೊಂಡಿದ್ದೀರಿ. ಅದಕ್ಕೆ ಇದರ ಬಗ್ಗೆ ಈ ಚರ್ಚೆ ಆಗಬೇಕು. ಅದಕ್ಕೆ ಈ ತಕ್ಷಣವೇ ಅವಕಾಶ ಕೊಟ್ಟರೆ ನಮ್ಮವರು ಕೂಡ ಪ್ರಾರಂಭ ಮಾಡುತ್ತಾರೆ. ಎಲ್ಲರೂ ಕೂಡ ಇದರ ಬಗ್ಗೆ ಮಾತನಾಡುತ್ತಾರೆ. ರಾಜ್ಯದ ಹಿತದೃಷ್ಟಿಯಿಂದ ಅಧ್ಯಕ್ಷರೇ, ಏಕೆ ಈ ರೀತಿ ಆಗುತ್ತಿದೆ? ಏಕೆ ಈ ರೀತಿ

ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದೀರಿ? ಈ ಹಿಂದೆ ಕೂಡ ಶ್ರೀಮಾನ್ ಸಂತೋಷ್ ಹೆಗಡೆರವರೇ ತಮ್ಮ ವರದಿಯಲ್ಲಿ ಹೇಳಿದ್ದಾರೆ, ಏನು ಅನೇಕ ಅಧಿಕಾರಿಗಳನ್ನು ಬಳಸಿಕೊಂಡು ಇವತ್ತಿನ ದಿವಸ illegal mining ನಡೆದಿದ್ದು ನಿಜ. ಇದನ್ನು ನಿಲ್ಲಿಸಬೇಕಾದರೆ ಇದರ ಬಗ್ಗೆ ನಾವು deep ಆಗಿ, ಸವಿಸ್ತಾರವಾಗಿ ನಾವು ಅಭ್ಯಾಸ ಮಾಡಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಿದ ಮೇಲೂ ಕೂಡ ಇವತ್ತು ಈ ರೀತಿ ಮಾಡುವಂಥ ಅವಶ್ಯಕತೆ ಏನಿತ್ತು ಎನ್ನುವುದನ್ನು ಹೇಳಬೇಕು ಮತ್ತು ನಿಮ್ಮ ನೋಟಿಸಿಗೆ ಅದರಲ್ಲಿರುವಂಥ ಮೂರು ವಿಷಯಗಳಿವೆ. ಅದೆಲ್ಲವನ್ನು ಹೇಳಲಿಕ್ಕೆ ಹೋಗುವುದಿಲ್ಲ. ಏಕೆಂದರೆ ತಮಗೆ ಇದರ ಬಗ್ಗೆ ಗೊತ್ತಿದೆ, ಕಾಳಜಿ ಇದೆ. ತಕ್ಷಣ ಒಪ್ಪಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅಧ್ಯಕ್ಷರೇ, ಈ ನಿಲುವಳಿ ಕರ್ನಾಟಕ ವಿಧಾನಸಭೆ ಕಾರ್ಯ ವಿಧಾನ ಹಾಗು ನಡವಳಿಕೆಯ ನಿಯಮ 60 ನೇ ನಿಯಮದ ಮೇರೆಗೆ ದಿನಾಂಕ 21-01-2009 ರಂದು ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತಾಪಿಸಲು ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತೇನೆ. ಸಚಿವರುಗಳಾದ ಶ್ರೀ ಜನಾರ್ಧನ ರೆಡ್ಡಿ ಹಾಗು ಕರುಣಾಕರ ರೆಡ್ಡಿ ನಿರ್ದೇಶಕರುಗಳಾದ ಓಬಳಾಪುರದ ಮೈನ್ಸ್ ಸಂಸ್ಥೆ, ಕರ್ನಾಟಕದ ಗಡಿ ಭಾಗದ ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಅಕ್ರಮ ಗಣಿಗಾರಿಕೆ ನಡೆಸಿದೆಯೆಂದು ಮಾನ್ಯ ಲೋಕಾಯುಕ್ತರು ನೀಡಿರುವ ವರದಿಗೆ ವ್ಯತಿರಿಕ್ತವಾಗಿ ಮುಖ್ಯಮಂತ್ರಿಗಳ ಅಧೀನದಲ್ಲಿರುವ ಅರಣ್ಯ ಇಲಾಖೆ ಈ ಸಂಸ್ಥೆ ಯಾವುದೇ ಅರಣ್ಯ ಭೂಮಿಯನ್ನು ಅತಿಕ್ರಮಿಸಿಲ್ಲ ಎಂಬ ಅರ್ಥ ಬರುವ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸಿದೆಯೆಂದು ಪತ್ರಿಕೆಯಲ್ಲಿ ವರದಿ ಮಾಡಿದೆ.

ಅಲ್ಲದೆ ಇಂತಹ ಕಪೋಲಕಲ್ಪಿತ ವರದಿಗೆ ಸಹಿ ಮಾಡಲು ನಿರಾಕರಿಸಿದ ಹಿರಿಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ PCCF ದಿಲೀಪ್ ಕುಮಾರ್‌ರವರನ್ನು ಸ್ಥಳಾಂತರಿಸಿ ಅವರ ಜಾಗಕ್ಕೆ ಮಾನ್ಯ ನಾಗರಾಜುರವರನ್ನು ವರ್ಗಾಯಿಸಿ, ಅವರಿಂದ ವರದಿಗೆ ಸಹಿ ಮಾಡಿಸಲಾಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಮಹತ್ವದ ಈ ತುರ್ತು ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪಿಸುತ್ತಿದ್ದೇನೆ ಎಂದು ಹೇಳಿ ನಾನು ಇವತ್ತು ಪ್ರಸ್ತಾಪ ಮಾಡುತ್ತಿದ್ದೇನೆ. ಅದಕ್ಕೆ ಇಲ್ಲ, ಇಲ್ಲಿ ಸುಳ್ಳು ಇದೆ, ನಾವು ದಿಲೀಪ್ ಕುಮಾರ್‌ರವರನ್ನು transfer ಮಾಡಿ, ನಾಗರಾಜ್‌ರವರನ್ನು ಉಪಯೋಗ ಮಾಡಿಕೊಂಡು signature ಮಾಡಿಸಿ, ಹೊಸ ವರದಿ ತರಿಸಿಕೊಂಡಿದ್ದೇವೆ ಅನ್ನತಕ್ಕಂಥ ವರದಿ ಪತ್ರಿಕೆಯಲ್ಲಿ ಬಂದಿರುವುದು ತಪ್ಪು ಮಾಹಿತಿ ಇದೆ ಎಂದು ಹೇಳಿದರೆ ನಾನು ಚರ್ಚೆಗೆ ಹೋಗುವುದಿಲ್ಲ. ಆದರೆ, ಈ

ವರದಿ ಅಧಿಕೃತವಾಗಿ ಕೊಟ್ಟಿದ್ದಾರೆ ಎನ್ನುವ ಮಾಹಿತಿ ಬಂದಿದೆ. ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಚಾರ. Press report encroachment ಮೇಲೆ ತರಿಸತಕ್ಕದ್ದು ಮತ್ತು ಇವತ್ತು ಏನು ನಾವು ಕಚ್ಚಾಡುತ್ತಿದ್ದೇವೆ, ಈಗಾಗಲೆ ಪಕ್ಷದ ಮುಖಂಡರಾದ ಹಾಗೂ ಮೇಲ್ಮನೆ ನಾಯಕರಾದ ಶ್ರೀ ಉಗ್ರಪ್ಪರವರಿಗೆ ಕಳುಹಿಸಿದ್ದೇವೆ. ಅವರೂ ಕೂಡ ಒಂದು ವರದಿಯನ್ನು 16-11-2008ಕ್ಕೆ ಕೊಟ್ಟಿದ್ದಾರೆ. ಅದರಲ್ಲಿರುವ ವರದಿ, ಅವರು ಕೊಟ್ಟಂಥ ವರದಿ ಮತ್ತು ಲೋಕಾಯುಕ್ತರ ವರದಿ ಈ ಎರಡೂ ಕೂಡ ಒಂದೇ ಆಗಿದೆ.

ಅಧ್ಯಕ್ಷರು :- paper cuttings ಕೊಡಿ. ನೀವು refer ಮಾಡುತ್ತಿರುವಂಥ paper cuttings ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, fresh report ಮಾಡಿಲ್ಲ, ಅಥವಾ ಹೊಸದಾಗಿ ಮಾನ್ಯ ಮುಖ್ಯಮಂತ್ರಿಯವರಾಗಲಿ ಅಥವಾ ಯಾರು Forest Department incharge ಆಗಿದ್ದಾರೆ ಅವರು ಮಾಡಿಲ್ಲವೆಂದರೆ ನಾವು ಬಿಡುವುದಿಲ್ಲ. Rule 69 ನಲ್ಲಿ ಚರ್ಚೆ ಮಾಡೋಣ. ಆದರೆ, ಇಲ್ಲಿ ಏಕೆ ಈ ರೀತಿ ನಡೆದಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. This shows the intention of the Government to protect encroachment on border area. ಗಡಿ ಭಾಗದಲ್ಲಿ ನಡೆದಂಥ encroachmentಗೆ ಪ್ರೋತ್ಸಾಹ ನೀಡಬೇಕು. ರಕ್ಷಣೆ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ವರದಿಯನ್ನು ತರಿಸಿಕೊಂಡಿದ್ದಾರೆ. ನಿಮಗೆ ಸಂತೋಷ್ ಹೆಗ್ಡೆಯವರ ಬಗ್ಗೆ ಅಪಾರವಾದಂಥ ಪ್ರೀತಿ ಇರುವಂಥವರು, ಅವರೇ ಕೊಟ್ಟಿದ್ದಾರೆಂದು ಪದೇ ಪದೇ ಹೇಳುವುದು, ಆದರೆ, ಏಕೆ ಅವರ ಮೇಲಿನ ವಿಶ್ವಾಸ ಇವತ್ತು ಹೊರಟು ಹೋಯಿತೇ? ನಿಮ್ಮ ಅಧಿಕಾರಿಗಳ ಮೇಲೆ ನಿಮಗೆ ವಿಶ್ವಾಸವಿಲ್ಲ, ಲೋಕಾಯುಕ್ತರ ಮೇಲೆ ವಿಶ್ವಾಸವಿಲ್ಲ. ಇದರ ಅರ್ಥವೇನೆಂದರೆ ನಿಜವಾಗಲೂ ಇದರಲ್ಲಿ ಏನೋ ನಡೆದಿದೆ. ಅದಕ್ಕಾಗಿ ಅವಕಾಶ ಮಾಡಿಕೊಡಿ ಅಧ್ಯಕ್ಷರೆ, ಸವಿಸ್ತಾರವಾಗಿ ಮೊದಲು ಚರ್ಚೆಗೆ ತೆಗೆದುಕೊಳ್ಳೋಣ. ರಾತ್ರಿ ಎಷ್ಟೋ ಹೊತ್ತಿನ ವರೆಗೆ ಕುಳಿತು ಮಾತನಾಡೋಣ ಎಂದರೆ ತಪ್ಪಾಗುತ್ತದೆ.

ಅಧ್ಯಕ್ಷರು :- Rule 69ನಲ್ಲಿ ಗಣಿಗಾರಿಕೆ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಜಯಚಂದ್ರರವರು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದಾರೆ.

ಅದರಲ್ಲಿ matter widen ಇದೆ. ಬೇಕಾದಷ್ಟು ಇದೆ ಅದರಲ್ಲಿ ಮಾತನಾಡುವುದಕ್ಕೆ. This is part of that.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ರೂಲ್ 69ನಲ್ಲಿ ಇದೆ. I never deny that.

ಶ್ರೀ ಟಿ.ಬಿ. ಜಯಚಂದ್ರ :- ನಾವು ನಿನ್ನೆ ದಿವಸ ನಿಲುವಳಿ ಸೂಚನೆ ಮುಖೇನ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ, ತಾವು ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಇದು immediate ಆಗಿ recent occurrence ಅಲ್ಲ ಎನ್ನುವ ಒಂದು ಕಾರಣಕ್ಕೋಸ್ಕರ ಅದನ್ನು Rule 69ರ ಅಡಿಯಲ್ಲಿ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೀರಿ. ನಾವು ತೀರ್ಮಾನಕ್ಕೆ ಬದ್ಧವಾಗಿದ್ದೇವೆ. ಆದರೆ, ಇವತ್ತು ಹಿಂದೂ ಪೇಪರ್‌ನಲ್ಲಿ ವರದಿಯಾಗಿರುವ ಅಂಶವನ್ನು ನೋಡಿದಾಗ ಬಹುಶ: ಇದು ಎಲ್ಲಾ ರೀತಿಯಲ್ಲೂ ಕೂಡ ಇವತ್ತು adjournment motion ನಲ್ಲಿ admit ಮಾಡಲೇಬೇಕಾದ ಪರಿಸ್ಥಿತಿ ನಿಮ್ಮ ಮುಂದೆ ಒದಗಿದೆ. ಕಾರಣವೇನೆಂದರೆ, ಬಾರ್ಡರ್ dispute ಎನ್ನುವುದು ಇವತ್ತಿನದ್ದಲ್ಲ. 1972ರಲ್ಲಿ ಹೈಕೋರ್ಟ್‌ನಲ್ಲಿ ತೀರ್ಮಾನ ಆಗಿರತಕ್ಕಂಥಾದ್ದು. ಹೈಕೋರ್ಟ್ ಆದೇಶ ಕೊಟ್ಟಿರುವಂಥಾದ್ದು. ಇದು ರಾಜ್ಯ ರಾಜ್ಯಗಳ ಗಡಿ ಮಧ್ಯದಲ್ಲಿರತಕ್ಕಂಥ ವಿಚಾರವಿರಬಹುದು. ಕರ್ನಾಟಕ ಮತ್ತು ಆಂಧ್ರಪ್ರದೇಶ ಈ ಎರಡೂ ರಾಜ್ಯಗಳನ್ನು ಸೇರಿಸಿ ಮಾಡಿ ಎಂದು ಹೈಕೋರ್ಟ್ ನಿರ್ದೇಶನವಿರುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಲೋಕಾಯುಕ್ತ ವರದಿಯನ್ನು, ಲೋಕಾಯುಕ್ತರೇ ಸ್ವತ: ಹೋಗಿ ನೋಡಿ, ಅಲ್ಲಿ ತಾಂತ್ರಿಕವಾಗಿದ್ದಂಥವರ ಸಲಹೆಯನ್ನು ಪಡೆದರು. ಅವರು ಕೊಟ್ಟಂಥ ಸಲಹೆ ಏನೆಂದರೆ, the inter-state boundary inside the Bellary range forest is under dispute between two states. Hence, it is suggested to get the order surveyed from the Survey of India. The Central Government apex body involving the concerned officials of Andra Pradesh and Karnataka. It is the part of the Lokayuktha report of Sri Santhosh Hegde. Lokayuktha report is a quasi judicial authority

duly constituted by the Government of India and the Government of Karnataka and it is placed before the Cabinet also and it has been published also. ಈ ಮಧ್ಯದಲ್ಲಿ ಈ ರೀತಿಯಾಗಿರುವಂತಹ ವರದಿ ಜವಾಬ್ದಾರಿ ಇರುವಂತಹ ಪತ್ರಿಕೆಯಲ್ಲಿ ವರದಿಯಾಗಿರುವುದೇನೆಂದರೆ, ದಿಲೀಪ್‌ಕುಮಾರ್‌ರವರು, Principal Chief Conservator of Forest. ಇಂತಹ ಹುದ್ದೆಗಳು ನಾಲ್ಕು ಇವೆ. ನಾಲ್ಕು ಹುದ್ದೆಗಳಿದ್ದಾಗ, No.1 is Sri Dilip Kumar and he ought to have signed it and taken a decision on this issue. When he has refused to sign, how could you replace him by another man? How do you forego that seniority? Overnight you have done it, and you are trying to patch up the whole concocted report of the Lokayuktha. What does it mean? ಸರ್ಕಾರಗಳು ಯಾವ ರೀತಿಯಾಗಿ ನಡೆಯುತ್ತಿವೆ ಎನ್ನುವುದಕ್ಕೆ ಇದಕ್ಕಿಂತ ಇನ್ನೇನಾದರೂ ಬೇಕೇ? ಇದಕ್ಕಿಂತ ಇನ್ನು ಯಾವ ನಿದರ್ಶನ ಬೇಕಾಗಿದೆ? ಮುಖ್ಯಮಂತ್ರಿಗಳು ನಿನ್ನೆಯ ದಿವಸ ಬಹಳ ಚೆನ್ನಾಗಿ ಹೇಳಿದರು. ಅಲ್ಲಿ ಒಂದು ಗಡಿ ವಿಚಾರದಲ್ಲಿ ಇಂಚು ಕೂಡ ವ್ಯತ್ಯಾಸವಾದರೂ ನಾನು ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ಇದು ಒಂದು ಇಂಚಿನ ಪ್ರಶ್ನೆ ಅಲ್ಲ. ಎಕರೆಗಟ್ಟಲೆ ಇವತ್ತು encrochment ಆಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರು ಹೇಳಿದ್ದು ಒಂದು ಇಂಚನ್ನೂ ಕೂಡ ಮಹಾರಾಷ್ಟ್ರಕ್ಕೆ ಬಿಡುವುದಿಲ್ಲವೆಂದು, ಆಂಧ್ರ ಪ್ರದೇಶಕ್ಕೆ ಬಿಡುವುದಿಲ್ಲವೆಂದು ಹೇಳಿದ್ದಾರೆಯೇ?

ಶ್ರೀ ಟಿ.ಬಿ. ಜಯಚಂದ್ರ :- ಇದು ವಿಧಾನಪರಿಷತ್ತಿನಲ್ಲಿ ಚರ್ಚೆಯಾದಂಥ ಸಂದರ್ಭದಲ್ಲಿ, ಓಬಳಾಪುರಂ ಮೈನ್ಸ್ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಯಾರದೇ ಹೆಸರನ್ನು ತೆಗೆದುಕೊಂಡಿಲ್ಲ. ಇವತ್ತು ಓಬಳಾಪುರಂ ಮೈನ್ಸ್‌ನ ರೂವಾರಿಗಳಾಗಿರತಕ್ಕಂಥವರು ಈ ಮನೆಯ ಸದಸ್ಯರೂ ಆಗಿರಬಹುದು, ಅವರು ಹೇಳುತ್ತಾರೆ, ಅಳತೆ ಮಾಡುವುದಕ್ಕೆ ನಮ್ಮದು ಯಾವುದೇ ರೀತಿಯಾದಂಥ objection ಇಲ್ಲ ಎಂದು ಒಂದು ಕಡೆ ಹೇಳುತ್ತಾರೆ. Patch-up

ಮಾಡತಕ್ಕಂಥ ಇಂತಹ ವಾದವನ್ನು ನೋಡಿದರೆ, ನನಗನಿಸುತ್ತದೆ ಸರ್ಕಾರ ಇದರಲ್ಲಿ ನೇರವಾಗಿ ಭಾಗಿಯಾಗಿದೆ, ಜವಾಬ್ದಾರಿಯಾಗಿದೆ. ಅಧ್ಯಕ್ಷರೆ, ದಯಮಾಡಿ ಇದನ್ನು ನಿಲುವಳಿ ಸೂಚನೆ ಮುಖೇನ ಸತ್ಯಾಂಶ ಹೊರಗೆ ಬರಬೇಕು. ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಇದೆಯೋ, ಇಲ್ಲವೋ, ಇದು ಯಾವ ಸಂದರ್ಭದಲ್ಲಿ ಆಯಿತು ಎನ್ನುವುದು ಗೊತ್ತಾಗಬೇಕು. ಸೀತಾಮಾತೆ ಪವಿತ್ರಳು ಎಂದು ಹೇಳಬೇಕಾದಾಗ ಆಕೆ ಅಗ್ನಿ ಪ್ರವೇಶವನ್ನು ಮಾಡಬೇಕಾಗುತ್ತದೆ. ಈಗ ಅಗ್ನಿ ಪ್ರವೇಶಕ್ಕೆ ಅವಕಾಶವಿಲ್ಲದೇ ಇರುವುದರಿಂದ ತಾವು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟರೆ, ಸರ್ಕಾರವು ಕೂಡ ಈ ಆರೋಪದಿಂದ ಹೊರಬರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತೇನಾದರೂ ನೀವು ಇದಕ್ಕೆ ಅವಕಾಶ ಕೊಡದಿದ್ದರೆ, ಚರ್ಚೆಯಾಗದಿದ್ದರೆ, ಈ ಮನೆಯಿಂದ ಯಾವ ಸಂದೇಶ ಜನಗಳಿಗೆ ಹೋಗುತ್ತದೆ ಎನ್ನುವುದನ್ನು ತಮಗೆ ಮನವರಿಕೆ ಮಾಡಿಕೊಡಲು ನಾನು ಇಷ್ಟಪಟ್ಟಿದ್ದೇನೆ. ಆದ್ದರಿಂದ, ದಯಮಾಡಿ ತಾವು adjournment motionಗೆ ಅವಕಾಶ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರ ಸದಸ್ಯರು 69ನೇ ನಿಯಮದ ಮೇರೆಗೆ ಇವತ್ತು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ನಿಲುವಳಿ ಸೂಚನೆಗೆ ಅವಕಾಶ ಕೊಡಲಿಕ್ಕೆ ಒಂದಷ್ಟು ಅಂಶಗಳಿವೆ. "Notice of an Adjournment Motion shall be given one hour before the commencement of the sitting on the day on which the motion is proposed to be made, to the Secretary and the copies thereof" ಎಂದು ಇದೆ. ಇಲ್ಲಿ ನಾನು ನೋಡುತ್ತಿದ್ದೇನೆ. ನಮ್ಮ ಸದನ ಇವತ್ತು ಪ್ರಾರಂಭವಾಗಿರುವುದು 10.30 ಗಂಟೆಗೆ. ಈ ಸೂಚನೆಯನ್ನು 10.00 ಗಂಟೆಗೆ ಕಾರ್ಯದರ್ಶಿಗಳಿಗೆ ಕೊಟ್ಟಿರುವುದಕ್ಕೆ acknowledgement ಸಹ ಇದೆ. ಇದು ಮೊದಲನೆಯ ತಾಂತ್ರಿಕ ಅಂಶ, ಇದು ತಮಗೆ ಬಿಟ್ಟಂಥಾದ್ದು. ಎರಡನೆಯದು, ಈಗಾಗಲೇ, ನಿನ್ನೆಯ ದಿವಸ ಇದಕ್ಕೆ ಸಂಬಂಧಪಟ್ಟಂಥ ಒಂದು ವಿಚಾರ ಬಂದಾಗ ನಾವು ಚರ್ಚೆ ಮಾಡಿ, ಇವತ್ತಿನ ನಮ್ಮ ಅಜೆಂಡಾದಲ್ಲಿ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಎಂದು ಬಂದಿದೆ.

ನಾನು ಈಗಾಗಲೇ ಸದನದಲ್ಲಿ ಒಂದು ಸಲ ಹೇಳಿದ್ದೇನೆ. Adjournment Motion not to be resorted to when there are other means of ventilating grievances. ಈಗ ನಮ್ಮ ಮುಂದೆ ಎರಡು ಅವಕಾಶವಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ, ಇನ್ನೊಂದು, ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ, ಅದರಲ್ಲಿ ಶ್ರೀಯುತರುಗಳಾದ ಟಿ.ಬಿ.ಜಯಚಂದ್ರ, ಸಿ.ಎಸ್. ನಾಡಗೌಡ, ಬಿ.ಮುನಿಯಪ್ಪ, ಎ.ಮಂಜು, ವಿ.ಶ್ರೀನಿವಾಸ ಪ್ರಸಾದ್ ಹಾಗೂ ಇತರರು Opposition Leader ಒಬ್ಬರ ಹೆಸರಿಲ್ಲ. ಅದನ್ನು ಬಿಟ್ಟರೆ, ಇತರರು ರಾಜ್ಯದ ಬಳ್ಳಾರಿ ಹಾಗೂ ಇತರ ಪ್ರದೇಶಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಮತ್ತು ಗಡಿ ಒತ್ತುವರಿ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ರಾಜ್ಯದ ಸಂಪತ್ತನ್ನು ರಕ್ಷಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ವಿಚಾರದಲ್ಲಿ ನೀಡಿರುವ ಸೂಚನೆಯ ಬಗ್ಗೆ ಚರ್ಚೆ ಇದರಲ್ಲೇ ಮತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ನೀವು ತಂದಿರುವ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡಲು ವ್ಯಾಪಕವಾದ ಅವಕಾಶವಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಇಂದಿನ ಅಜೆಂಡಾದಲ್ಲಿ ಇದನ್ನು ಮೂರನೆಯದಾಗಿ ಹಾಕಿಕೊಂಡಿರುವುದರಿಂದ ಇದರ ಮಹತ್ವ ಕಡಿಮೆಯಾಗುತ್ತದೆ ಎಂದು ಹೇಳಿದರು. ಅಗತ್ಯವಿದ್ದರೆ ಮೂರನೆಯದಾಗಿ ಹಾಕಿಕೊಂಡಿರುವುದನ್ನು ಮೊದಲನೆಯದಾಗಿಯೇ ತೆಗೆದುಕೊಳ್ಳಿ. ನಾನು ಇದನ್ನು ತಮ್ಮ ವಿವೇಚನೆಗೆ ಬಿಟ್ಟುಬಿಡುತ್ತೇನೆ. ಆಗ ಮಹತ್ವ ಜಾಸ್ತಿಯಾಗುತ್ತದೆ. ಆದರೆ, ನಿಲುವಳಿ ಸೂಚನೆಗೆ ಇವತ್ತು ಏನು ತಂದಿದ್ದಾರೆ, ಒಂದೇ ವಿಚಾರಕ್ಕೆ ಎರಡು ಸಲ ನಿಲುವಳಿ ಸೂಚನೆ ನಿಲುವಳಿ ಸೂಚನೆ ತರುವುದು ಸರಿಯೇ? ಇದರ ಬಗ್ಗೆ ನಮಗೆ ಚರ್ಚೆ ಮಾಡುವುದಕ್ಕೆ ಬೇರೆ ಬೇರೆ ರೀತಿಯಲ್ಲಿ ಅವಕಾಶ ಲಭ್ಯವಿದೆ. ಆದುದರಿಂದ ಖಂಡಿತ ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. They can definitely well utilized. 69ನೇ ನಿಯಮದ ಅಡಿಯಲ್ಲಿ ಚರ್ಚೆಗೆ ಉಪಯೋಗಿಸಿಕೊಳ್ಳಬಹುದು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಲ್ಲಿ ಉಪಯೋಗಿಸಿಕೊಳ್ಳಬಹುದು. ನಾನು ಹೇಳಿದ ಹಾಗೆ ಇದನ್ನು ಮೊದಲನೇ ವಿಷಯವಾಗಿ ತೆಗೆದುಕೊಳ್ಳಿ. ಇನ್ನೆರೆಡು ಬೇಕಾದರೆ ಆನಂತರ ತೆಗೆದುಕೊಳ್ಳಿ. ಇದು ತಮ್ಮ ವಿವೇಚನೆಗೆ ಬಿಟ್ಟಿದ್ದು. ಒಂದು ತಾಂತ್ರಿಕ ಅಂಶ. ಇನ್ನೆರೆಡು ಈ ಅಂಶ. ಇದರ ಬಗ್ಗೆ ದಯವಿಟ್ಟು ತಾವು ruling ಕೊಡಿ.

ಶ್ರೀ ಟಿ.ಬಿ. ಜಯಚಂದ್ರ :- ಇದು ಸರ್ಕಾರದ ನಿಲುವಾಗುತ್ತದೆ. ತಾವು ಅವರ ವಾದವನ್ನು ಕೇಳಿದಿರಿ ಹಾಗೂ ನಮ್ಮ ವಾದವನ್ನು ಕೇಳಿದಿರಿ ದಯಮಾಡಿ ಈ formalityಯಲ್ಲಿ technicality ಮೇಲೆ, ಬೆಳಗಾಂನಲ್ಲಿ ಒಬ್ಬರು typist ಸಿಕ್ಕುತ್ತಿಲ್ಲ. ಆ technicality ಯನ್ನು ಬಹಳ ದೊಡ್ಡದಾಗಿ focus ಮಾಡುವಂಥದ್ದಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :- ನಾನು ಸಣ್ಣದಾಗಿ ಹೇಳುತ್ತಿರುವುದನ್ನು ನೀವು ದೊಡ್ಡದಾಗಿ ಮಾಡುತ್ತಿದ್ದೀರಿ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- You please understand.

ಅಧ್ಯಕ್ಷರು :- ನೋಡಿ ಜಯಚಂದ್ರರವರೆ, ಇದಕ್ಕೆ ಇಷ್ಟು emotional ಆಗುವ ಅವಶ್ಯಕತೆ ಇಲ್ಲ. ಅವರ duty ಅವರು ಮಾಡಿದ್ದಾರೆ. ಒಂದು ನಿಮಿಷ ದಯವಿಟ್ಟು ನಾನು ಮಾತನಾಡುವುದನ್ನು ಕೇಳಿ. ನೀವು 15 ನಿಮಿಷ ಲೇಟಾಗಿ ಕೊಟ್ಟಿದ್ದೀರಿ. ನಿಜವಾಗಿಯೂ 15 ನಿಮಿಷ ತಡವಾಗಿ ಕೊಟ್ಟಿದ್ದರಿಂದ ಅಲ್ಲೇ ನನ್ನ chamberನಲ್ಲೇ reject ಮಾಡಿ ಕಳುಹಿಸುತ್ತಿದ್ದೆ. ಆದರೆ, ಬೆಳಗಾಂನಲ್ಲಿ ವಿಧಾನಸಭಾ ಅಧಿವೇಶನ ನಡೆಯುತ್ತಿದೆ. ಕೆಲವೊಂದು ಅನಾನುಕೂಲತೆಗಳು ಆಗಿವೆಯೆಂದು, ನೋಡೋಣ ಎಂದು ಇದ್ದೆ. inconvenience ಆಗುತ್ತದೆ, communication ಇರುವುದಿಲ್ಲ ಎಂದು ಹೇಳಿ, Question hourನ್ನು ನಾವು ಯಾವ ರೀತಿ ಬೇಡವೆಂದು ಅಲ್ಲಿ held up ಮಾಡಿದ್ದೇವೆ, ಆ ರೀತಿಯಲ್ಲಿ ವಿಶೇಷವಾಗಿ ಇವತ್ತು ಪ್ರಸ್ತಾವನೆ ಮಾಡಲಿಕ್ಕೆ ಅವಕಾಶ ಕೊಟ್ಟದ್ದೇನೆಂದರೆ, ಆ delay condole ಮಾಡಿದ ಹಾಗೆಯೇ, ಅದಕ್ಕೆ ಹೆಚ್ಚಿನ ಚರ್ಚೆ ಮಾಡುವ ಅವಶ್ಯಕತೆಯೇ ಇಲ್ಲ. ನಾವು ಕೊಟ್ಟಿದ್ದೇವೆ. ಇದು ನಿಲುವಳಿ ಸೂಚನೆಯಲ್ಲಿ ಬರುತ್ತದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ನಿಯಮ 69ರಲ್ಲಿ ಇದೇ ವಿಚಾರದ ಬಗ್ಗೆ ಈಗಾಗಲೇ agenda ದಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಅಧ್ಯಕ್ಷರೆ, ಸುರೇಶ್ ಕುಮಾರ್ ಅವರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆಂದು ಗೊತ್ತಿದ್ದೆ ನಾನು ವೈಯಕ್ತಿಕವಾಗಿ ಅಧ್ಯಕ್ಷರ chamberಗೆ ಹೋಗಿ, ಸಾರ್, ಅನಾನುಕೂಲತೆಯಿಂದ ಸ್ವಲ್ಪ ಲೇಟಾಗಿದೆ. ಆದುದರಿಂದ ತಾವು ದಯವಿಟ್ಟು ಇದಕ್ಕೆ

ಅವಕಾಶ ಮಾಡಿ ಕೊಡಿ. ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿದೆ. ಏಕೆಂದರೆ ಇವತ್ತೇ ಅದರ ವರದಿ ಬಂದಿದೆ. ಏನೋ 2-3 ದಿವಸ ಆಗಿದ್ದರೆ ತಾವು ಹೇಳಿದಂತೆ, ನಿಯಮ 69ರ ಕೆಳಗೆ ಇದನ್ನೂ ಕೂಡ ತೆಗೆದುಕೊಂಡು ಚರ್ಚೆ ಮಾಡ ಬಹುದಾಗಿತ್ತು. ಆದರೆ, ಅದು ಇವತ್ತೇ ವರದಿಯಾಗಿರುವುದರಿಂದ ಅದರಲ್ಲೂ ಕೂಡ ಒಬ್ಬ ಅಧಿಕಾರಿಯನ್ನು ಬದಲಾವಣೆ ಮಾಡಿ ಇನ್ನೊಬ್ಬರನ್ನು ಹಾಕಿ ಅವರ signature ತೆಗೆದುಕೊಂಡು ಆ reportಗೆ authenticity ಕೊಡುವಂತಹ ಪ್ರಯತ್ನ ಮಾಡಿದ್ದು, ಲೋಕಾಯುಕ್ತ reportನ್ನು ಕಡೆಗಣಿಸಿ, ಹೊಸ reportನ್ನು ಸೃಷ್ಟಿ ಮಾಡಿದ್ದಾರೆ. ನೀವು ಏನು ಮಾಡುವುದಕ್ಕೆ ಹೊರಟಿದ್ದೀರಿ? ಈ ವಿಷಯ ಅತ್ಯಂತ ಮಹತ್ವವುಳದ್ದು. ಆ ದೃಷ್ಟಿಯಿಂದ ತಾವು Adjuourment Motion ರೂಪದಲ್ಲಿ ಅವಕಾಶ ಮಾಡಿಕೊಡುತ್ತೀರಿ ಎನ್ನುವ ನಂಬಿಕೆ ನನಗಿದೆ. ಈ ವಿಷಯ ಬಹಳ ಮಹತ್ವದ್ದು ಇದೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು :- ನಿಯಮ 61 ಏನು ಹೇಳುತ್ತದೆಂದರೆ, ನಿಲುವಳಿ ಸೂಚನೆ ತರುವ ಹಕ್ಕನ್ನು ನಿರ್ಬಂಧಿಸುವುದು, ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕುದು :

1. ಒಂದು ಉಪವೇಶನದಲ್ಲಿ ಅಂಥ ಒಂದಕ್ಕಿಂತ ಹೆಚ್ಚು ನಿಲುವಳಿಸೂಚನೆಯನ್ನು ಕೊಡತಕ್ಕದ್ದಲ್ಲ;
2. ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೂಡದು:
3. ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರಬೇಕು;
4. ನಿಲುವಳಿ ಸೂಚನೆಯು ಹಕ್ಕು ಬಾಧ್ಯತೆಯನ್ನು ಪ್ರಶ್ನಿಸುವಂತಿರಕೂಡದು;
5. ಅದೇ ಅಧಿವೇಶನದಲ್ಲಿ ಚರ್ಚೆಯಾಗಿರುವ ವಿಷಯದ ಮೇಲೆ ಪುನ: ಚರ್ಚೆಗಾಗಿ ನಿಲುವಳಿ ಸೂಚನೆ ಇರತಕ್ಕುದಲ:

ನಾವು ಇಲ್ಲಿ ಇದೇ point rise ಮಾಡುತ್ತಿರುವುದು. ಮಾನ್ಯ ಜಯಚಂದ್ರರವರು ಮೊದಲನೇ ದಿವಸವೇ ಗಣಿಗಾರಿಕೆ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ, preliminary submission

ಕೂಡ ಮಾಡಿದ್ದೀರಿ. ಕೊನೆಗೆ ಸರ್ಕಾರ ಚರ್ಚೆ ಮಾಡುವುದಕ್ಕೆ ತಯಾರಿದೆ ಎಂದು ಹೇಳಿದ ಮೇಲೆ ಅದನ್ನು Rule 69 ಗೆ convert ಮಾಡಿ agenda ದಲ್ಲಿ fix ಮಾಡಿದ್ದೇನೆ. ಹೀಗಾಗಿ ಇವತ್ತು ನಾನು ಹೇಳುವಂಥಾದ್ದು ಈಗಾಗಲೇ ಒಂದು ವಿಚಾರವನ್ನು ನಿಲುವಳಿ ಸೂಚನೆ ಮುಖಾಂತರ ತಂದಿರುವುದು ಮತ್ತು ನಿಯಮ 69ಕ್ಕೆ convert ಆಗಿ ಇವತ್ತಿನ agenda ದಲ್ಲಿದೆ. ಅದು broader issue ಅದರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಅಕ್ರಮ ಗಣಿಗಾರಿಕೆ ವಿಷಯದ ಬಗ್ಗೆಯೂ ಚರ್ಚೆ ಮಾಡಬಹುದು. It is also part of that issue. ಇವತ್ತು ಏನು raise ಮಾಡುತ್ತಿದ್ದೀರಿ, this is also part of that issue ಅದನ್ನು raise ಮಾಡಲಿಕ್ಕೆ ಅವಕಾಶವಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ್ದನ್ನು ನಾನು ಭಾಗಶ: ಒಪ್ಪುತ್ತೇನೆ. ಆದರೆ, ಇವತ್ತು ಪ್ರಸ್ತಾಪ ಮಾಡಿದಂತಹ ವಿಚಾರ ನಿನ್ನೆ ಇರಲಿಲ್ಲ, ಮೊನ್ನೆ ಇರಲಿಲ್ಲ. ಇದು ಹೊಸ report. ಹೊಸ report ಅಂದ ಮೇಲೆ the cause of action arises today, not yesterday. ಇವತ್ತು ಏನಾಗಿದೆಯೆಂದರೆ, ದಿಲೀಪ್ ಕುಮಾರ್ ಎನ್ನುವ ವ್ಯಕ್ತಿ reportಗೆ signature ಹಾಕಲಿಲ್ಲವೆಂದು ಅವನನ್ನು ತೆಗೆದು ಶ್ರೀಮಾನ್ ನಾಗರಾಜ್ ಎನ್ನುವ ವ್ಯಕ್ತಿಯನ್ನು ಅವರ ಜಾಗದಲ್ಲಿ ಕೂರಿಸಿ ಅವರಿಂದ signature ಮಾಡಿಸಿ ಅವರಿಂದ ವರದಿ ತರಿಸಿಕೊಂಡು submit ಮಾಡಿದ್ದಾರೆ ಎನ್ನುವುದು ಹೊಸ ವಿಷಯ. ಇದು ಹಿಂದೆ ಇರಲಿಲ್ಲ. ಹೊಸ ವಿಷಯವನ್ನು ತಾವು ಈ ಹಿಂದೆ ಅರಣ್ಯ ಸಂಬಂಧಪಟ್ಟ ಚರ್ಚೆಯಲ್ಲಿ ತೆಗೆದುಕೊಳ್ಳಬೇಕೆಂದರೆ ಇದು ಬೇರೆ, ಅದು ಬೇರೆ. ಇದಕ್ಕೆ ಕಾರಣವೇನಾಯಿತು? ಏಕೆ ದಿಲೀಪ್ ಕುಮಾರ್ ಅವರನ್ನು ತೆಗೆದುಹಾಕಿದರು? ಏಕೆ ನಾಗರಾಜ್ ಅವರ ಕಡೆಯಿಂದ signature ಮಾಡಿಸಿಕೊಂಡರು? ಏಕೆ ಈ ಹಿಂದೆ ಇದ್ದಂತಹ Mrs. Singh ಲೋಕಾಯುಕ್ತರವರಿಗೆ assist ಮಾಡಿದರು? ಅವರ reportನ್ನು ಇವರು ಏಕೆ ಒಪ್ಪಲಿಲ್ಲ? ಈ ಹೊಸ ಪ್ರಶ್ನೆಗಳು ಉದ್ಭವಿಸಿದ ಕಾರಣ ನಾವು ಈ ನಿಲುವಳಿ ಸೂಚನೆಯನ್ನು ಕೊಟ್ಟದ್ದೇವೆ ಹೊರತು, ಹಳೆಯದು, ಗಡಿ ಭಾಗದ ಬಗ್ಗೆ, ಯಾರ್ಯಾರು ಅದರಲ್ಲಿ involve ಆಗಿದ್ದಾರೆ, illegal mining, forest land ಅದರ ಬಗ್ಗೆ ನಂತರ detail ಆಗಿ ಚರ್ಚೆ ಮಾಡೋಣ. ಅಧಿಕಾರಿಗಳನ್ನು ಏಕೆ ನೀವು replace ಮಾಡಿ, ಇನ್ನೊಬ್ಬ

ಅಧಿಕಾರಿಯನ್ನು ತಂದು ಅವರ ಮುಖಾಂತರ signature ಮಾಡಿಸಿಕೊಂಡು, ಲೋಕಾಯುಕ್ತ reportನ್ನು ಅಲ್ಲಗಳೆಯುವಂತಹ ಪ್ರಸಂಗ ಏಕೆ ಬಂತು? ಅದು ಈ ಸದನದ ಮುಖಾಂತರ ಚರ್ಚೆಯಾಗಬೇಕು. ಇದಕ್ಕಾಗಿ ನಾವು ಸೀಮಿತವಾಗಿ ತಂದಿದ್ದೇವೆ ಹೊರತಾಗಿ, ಆ ವಿಷಯವಾಗಿ ಗಹನವಾಗಿ ನೀವೆಲ್ಲಾ mapಗಳನ್ನು ಇಡುತ್ತೀರಿ, ಏನೇನು ಇದೆ, ಯಾರ್ಯಾರು involve ಆಗಿದ್ದಾರೆ ಎನ್ನುವುದನ್ನು ಹೇಳಿ. ನಾವು ಅದನ್ನು ultimate ಆಗಿ ಸಿ.ಬಿ.ಐ ತನಿಖೆ ಆಗಲಿ ಎಂದು ಒಪ್ಪಿಕೊಂಡಿದ್ದೇವೆ. ಏಕೆಂದರೆ, ನಿನ್ನೆ ಮೇಲ್ಮನೆಯಲ್ಲಿಯೂ ಕೂಡ ಮಾನ್ಯ ಜನಾರ್ಧನ ರೆಡ್ಡಿಯವರು ಒಪ್ಪಿಕೊಂಡಿದ್ದಾರೆ. ನಾನೇ ಅದರ Director ಆಗಿದ್ದೇನೆ. ಇವತ್ತು ಇದ್ದೇನೆ, ನಾಳೆಯೂ ಇರುತ್ತೇನೆ, ಮುಂದೆಯೂ ಇರುತ್ತೇನೆಂದು ಅವರೇ ಹೇಳಿದ್ದಾರೆ. ಒಬ್ಬ ಈ ಸದನದ ಸದಸ್ಯ, ಮಂತ್ರಿ ಅವರೂ ಒಪ್ಪಿಕೊಂಡ ಮೇಲೆ ಅದನ್ನು ನೀವು ನೇರವಾಗಿ ಸಿ.ಬಿ.ಐಗೆ ಒಪ್ಪಿಸಬೇಕು. ಏಕೆಂದರೆ, ಹಿಂದೆ ಮಾಜಿ ಮುಖ್ಯಮಂತ್ರಿಗಳು ಇಬ್ಬರೂ ಕೂಡ ಇದರಲ್ಲಿ involve ಆಗಿದ್ದರು ಎಂದು ಎಲ್ಲರೂ ಈ ವರದಿ ಪ್ರಕಾರ ಹೇಳುತ್ತಿದ್ದರು. ಯಾರೋ ಅಲ್ಲಗಳೆದರೂ ಕೂಡ ಇಲ್ಲ, ಎಲ್ಲರೂ ಇದ್ದಾರೆ ಎಂದು ಹೇಳಿದಾಗ ನೇರವಾಗಿ ಸಿ.ಬಿ.ಐ ತನಿಖೆಗೆ ಒಳಪಡಿಸಲಿ ನೋಡೋಣ. But ಈಗ ಏಕೆ ಬಂತು? ಯಾರ protection ಗೋಸ್ಕರ ಈ ಹೊಸ report ಬಂತು? ಏಕೆ transfer ಮಾಡಿದ್ದೀರಿ? ಈ ವಿಷಯವನ್ನು ಪ್ರಸ್ತಾಪ ಮಾಡಬೇಕು.

ಶ್ರೀ ಟಿ. ಬಿ. ಜಯಚಂದ್ರ :- It is a recent occurrence, today it has appeared in the press. ಇದರಲ್ಲಿ Motion shall not revive discussion on a matter which has been discussed in the same session. It is not the same subject; the subject is entirely new, because it is trying to patch up the whole thing. ಈ ನಿಯಾಮವಳಿಗಳನ್ನು ಪುಸ್ತಕದಲ್ಲಿಟ್ಟು, ತಮ್ಮ ಪರಮೋಚ್ಚ ಅಧಿಕಾರವಿದೆ. ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದು ವಿಶೇಷ ಸಂದರ್ಭ ರಾಜ್ಯದ ಬೊಕ್ಕಸದ ದೃಷ್ಟಿಯಿಂದ ತಾವು ಇವತ್ತು ಒಪ್ಪಿಗೆ ಕೊಡಬೇಕು.

ಅಧ್ಯಕ್ಷರು :- ಈ ಹಿಂದೆ ನೀವು ನಿಲುವಳಿ ಸೂಚನೆ ಮಂಡಿಸಿದ್ದ ಸಂದರ್ಭದಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ ಎಂದರೆ, **"ಕಬ್ಬಿಣ ಅದಿರಿನ ಅಕ್ರಮ ಗಣಿಗಾರಿಕೆ ಹಾಗೂ ಬಳ್ಳಾರಿ ಜಿಲ್ಲೆಯ ಸಂಡೂರು ಭಾಗದಲ್ಲಿ ರಾಜ್ಯದ ಗಣಿ**

ಪ್ರದೇಶದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವ ಆಂಧ್ರದ ಗಣಿ ಮಾಲೀಕರು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಅವ್ಯಾಹತವಾಗಿ ಕೊಳೆ ಹೊಡೆಯುತ್ತಿದ್ದು, ಇದರಿಂದ ರಾಜ್ಯದ ಜನತೆಗೆ ಹತ್ತಾರು ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗುತ್ತಿದೆ. ಈ ಸಂಗತಿಯನ್ನು ಪುಷ್ಟೀಕರಿಸಿ ಮಾನ್ಯ ಲೋಕಾಯುಕ್ತರು ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿಗಳನ್ನು ಸಲ್ಲಿಸಿರುತ್ತಾರೆ." ಎಂದು ತಾವು ನಿಲುವಳಿ ಸೂಚನೆ ಕೊಟ್ಟಿದ್ದೀರಿ. ಇಲ್ಲಿ ನೀವು ರೆಫರೆನ್ಸ್ ಮಾಡಿದ್ದು ಏನೆಂದರೆ, ಲೋಕಾಯುಕ್ತರ ರೆಫರೆನ್ಸ್ ನಿಲುವಳಿ ಸೂಚನೆಯಲ್ಲಿದೆ. ಅಂದರೆ, ಇವತ್ತಿನ ನಿಲುವಳಿ ಸೂಚನೆಯಲ್ಲಿ ಏನಿದೆಯೆಂದರೆ, part and parcel of the earlier Adjournment Motion. ಹೀಗಾಗಿ, ನಿಮಗೆ ಇಲ್ಲಿ ಚರ್ಚಿಸಲು ಸಾಕಷ್ಟು ಅವಕಾಶಗಳಿವೆ.

ಇವತ್ತು ಅಕಸ್ಮಾತ್ ನಿಲುವಳಿ ಸೂಚನೆಯಡಿ ಈ ವಿಷಯ ಬರುವುದಿಲ್ಲವೆಂದರೆ, ಮುಂದೆ ನಾನು ಏನು ಮಾಡಬೇಕು? ನಿಯಮ 69ಕ್ಕೆ ಪರಿವರ್ತಿಸಿ ನಿಮಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕು. ನಿಯಮ 69ಕ್ಕೆ ಪರಿವರ್ತಿಸುವುದಾದರೆ, ಈಗಾಗಲೇ ಅಜೆಂಡಾದಲ್ಲಿ ನಿಯಮ 69ರಡಿ ಪ್ರಸ್ತಾಪಿಸಲ್ಪಡುವ ವಿಷಯ ಇದೆ. ಅದಕ್ಕೋಸ್ಕರ, ನಾನು ಈಗ ಹೇಳುವುದೇನೆಂದರೆ, ಇವತ್ತು ನಿಮ್ಮೆಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡಿದ್ದೇನೆ. ನಿಲುವಳಿ ಸೂಚನೆಯಡಿ ನೀವು ಈ ವಿಷಯವನ್ನು ಏನು ಮಂಡಿಸಿದ್ದೀರಿ, ಇವತ್ತು ನಿಲುವಳಿ ಸೂಚನೆಯಡಿ ಈ ವಿಷಯ ಬರುವುದಿಲ್ಲ. ಆದುದರಿಂದ, ನಾನು ಇದನ್ನು ತಿರಸ್ಕರಿಸುತ್ತೇನೆ. ನಾನು ಹೇಳುವುದನೆಂದರೆ. . .

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ. ಇದರ ಬಗ್ಗೆ ನಾನು ಈಗ ರೂಲಿಂಗ್ ಕೊಡುತ್ತಿದ್ದೇನೆ. ಅದನ್ನೇ ನಾನು ಹೇಳುತ್ತಿದ್ದೇನೆ. ದಯವಿಟ್ಟು ಸಹಕರಿಸಿ. ಈಗಾಗಲೇ ಮೊದಲು ಸಲ್ಲಿಸಿದ್ದ ನಿಲುವಳಿ ಸೂಚನೆಯಲ್ಲಿ ಈ ವಿಷಯ ಬಂದಿದ್ದರಿಂದ, ಆ ಕಾರಣದ ಮೇಲೆ ಈ ನಿಲುವಳಿ ಸೂಚನೆಯನ್ನು ನಾನು ತಿರಸ್ಕರಿಸುತ್ತೇನೆ. ಆದರೆ, ಚರ್ಚೆಗೆ ಮಹತ್ವ ಬರಬೇಕು, ಚರ್ಚಿಸಬೇಕೆಂದು ನೀವು ಬಯಸಿದ್ದೀರಿ. ಚರ್ಚೆಗೆ ನಾವೂ ತಯಾರಿದ್ದೇವೆಂದು ಸರ್ಕಾರವೂ ಹೇಳಿದೆ. ಇದರ ಬಗ್ಗೆ ನಾನು ರೂಲಿಂಗ್ ಕೊಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೆ, ಒಂದು ನಿಮಿಷ. ನೀವು ಈ ಸದನದ Supreme Authority. ಆದರೆ, ತಮ್ಮ ಅಧಿಕಾರವನ್ನು judicious ಆಗಿ ಉಪಯೋಗಿಸಬೇಕು.

ಅಧ್ಯಕ್ಷರು :- ನಾನು judicious ಆಗಿಯೇ ಉಪಯೋಗ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈ ರೂಲ್ಸ್ ಅನ್ನು suspend ಮಾಡಿ allow ಮಾಡುವುದಕ್ಕೆ ನಿಮಗೆ ಅಧಿಕಾರವಿದೆ. ಯಾವಾಗ ಅಧಿಕಾರ ಇದೆಯೆಂದರೆ, ತಾವು ರಾಜ್ಯದ ಮತ್ತು ಜನರ ಹಿತದೃಷ್ಟಿಯಿಂದ ರೂಲ್ ಅನ್ನು ಸಸ್ಪೆಂಡ್ ಮಾಡಿ Adjournment Motionಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :- OK. ಅದಕ್ಕೋಸ್ಕರ, ನಾನು ಈ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ. . .

(ಮಾನ್ಯ ಸದಸ್ಯರಾದ ಶ್ರೀ ನೆ.ಲ. ನರೇಂದ್ರಬಾಬುರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು :- ನರೇಂದ್ರಬಾಬುರವರೆ, ನಾನು ಈಗ ರೂಲಿಂಗ್ ಕೊಡುತ್ತಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ನೆ.ಲ. ನರೇಂದ್ರಬಾಬು :- ನಾನೂ ಸಹ ಅದಕ್ಕೆ signatory ಆಗಿದ್ದೇನೆ.

ಅಧ್ಯಕ್ಷರು :- ಬೇಡ, ಬೇಡ. ಮತ್ತೆ ಚರ್ಚೆ ಬೇಡ. ಈಗಾಗಲೇ ನಿಮ್ಮ ಹಿರಿಯ ನಾಯಕರು ಮಾತನಾಡಿದ್ದಾರೆ. ಪ್ಲೀಸ್, ದಯವಿಟ್ಟು ಕುಳಿತುಕೊಳ್ಳಿ. ನಾನು ರೂಲಿಂಗ್ ಕೊಡುತ್ತಿದ್ದೇನೆ. ರೂಲ್ 69ರಡಿ. . .

(ಮಾನ್ಯ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬಾಬುರವರು ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು :- ನಾನು ಮಾತನಾಡುವಾಗ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಪ್ಲೀಸ್, ನಾನು ಹೇಳಿದ್ದೇನಲ್ಲ. ನಿಮ್ಮ ವಿರೋಧ ಪಕ್ಷದ ನಾಯಕರು, ಉಪ ನಾಯಕರಾದ ಜಯಚಂದ್ರರವರು ಮತ್ತು ಇತರರು ಮಾತನಾಡಿದ್ದಾರೆ.

ಈ ರೀತಿ ಪದೇ ಪದೇ ಮಾತನಾಡುವುದಾದರೆ, ಅದು ಸರಿ ಅಲ್ಲ....ನರೇಂದ್ರಬಾಬುರವರೆ, ದಯವಿಟ್ಟು ಕುಳಿತುಕೊಳ್ಳಿ. No, please. ಅದಕ್ಕೋಸ್ಕರ, ಇವತ್ತಿನ ನಿಲುವಳಿ ಸೂಚನೆಯಲ್ಲಿ ಈ ವಿಷಯು ಪುನ: ಪ್ರಸ್ತಾಪವಾಗಿರುವುದರ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯನ್ನು ನಾನು ತಿರಸ್ಕರಿಸುತ್ತೇನೆ. ರೂಲ್ 69ರಡಿ ಈಗಾಗಲೇ ಅಕ್ರಮ ಗಣಿಗಾರಿಕೆ ಬಗ್ಗೆ ಅಜೆಂಡಾದಲ್ಲಿ ನಿಗದಿಯಾಗಿದೆ. Calling Attentions ಏನಿವೆ, ಅವು ಮುಗಿದ ತಕ್ಷಣ ಮೊದಲು ಇದನ್ನು ತೆಗೆದುಕೊಳ್ಳುತ್ತೇನೆ. ಗಮನ ಸೆಳೆಯುವ ಸೂಚನೆಗಳಾದ ನಂತರ, ಮೊದಲನೇ ಅಜೆಂಡಾದಲ್ಲಿ ಅದನ್ನೇ ತೆಗೆದುಕೊಳ್ಳುತ್ತೇನೆ. ಅಲ್ಲಿಂದ ನಾವು ಚರ್ಚೆ ಪ್ರಾರಂಭಿಸೋಣ. ನಿಲುವಳಿ ಸೂಚನೆ ಆದ ತಕ್ಷಣವೇ ತೆಗೆದುಕೊಳ್ಳುತ್ತೇನೆ. ನಿಲುವಳಿ ಸೂಚನೆ ಮೇಲಿನ ಚರ್ಚೆ ಬಹಳ ಹೊತ್ತು ಆಗುವುದಿಲ್ಲ. ಅದಾದ ತಕ್ಷಣವೇ ಅಜೆಂಡಾದಲ್ಲಿ ಮೊದಲು ನಿಮ್ಮ ವಿಷಯವನ್ನೇ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಸಭಾಧ್ಯಕ್ಷರೆ, **"ಹಿಂದೂ"** ಪತ್ರಿಕೆಯಲ್ಲಿ ಬಂದಿರುವ ರಿಪೋರ್ಟ್ ನೋಡಿ. ಸಂತೋಷ್ ಹೆಗ್ಡೆಯವರು, This is very unfortunate ಎಂದು ಹೇಳುತ್ತಾರೆ. ದಯವಿಟ್ಟು ಈಗಲೇ ತೆಗೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ ತಾವು ಇದಕ್ಕಾದರೂ ಮಹತ್ವ ಕೊಡಿ. ನೀವು appoint ಮಾಡಿದ ಲೋಕಾಯುಕ್ತದವರು ಹೇಳುತ್ತಾರೆ. Reacting to the development Mr. Hegde said. That it was very unfortunate. ಅವರಿಗೆ unfortunate ಆದರೆ ನಿಮಗೆ fortunate?

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಚರ್ಚೆ ಮಾಡಿ, ತಮಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ :- ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಉದ್ದೇಶಿಸಿ ತಮಗೆ ಪತ್ರ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು :- ಆ ಪತ್ರ ಬಂದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನನಗೆ ಅರ್ಥ ವಾಗುತ್ತಿಲ್ಲ. ತಾವು ನಮ್ಮನ್ನು ಬಹಳ ಲಘುವಾಗಿ ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು :- ಇಲ್ಲ, ಹಾಗೇನಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೆಲ್ಲಾ ತಿಳಿದುಕೊಳ್ಳಬಾರದು.

2. **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು :**

ಅ) ವಿಷಯ :- ಸುವರ್ಣ ಸೌಧ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ ನಿಗದಿಯಾಗಿದ್ದರೂ ತರಾತುರಿಯಲ್ಲಿ ಪೂಜೆ ಮಾಡಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಕುಸ್ತಿಯಾಡುವ ಅಖಾಡವೇನಲ್ಲ. ಕುಸ್ತಿ ಆಡಿದರೆ atleast ಅವರವರ ಶಕ್ತಿಯನ್ನು physically ತೋರಿಸುತ್ತಾರೆ. ಆದರೆ, ಪ್ರಜಾಪ್ರಭುತ್ವದಲ್ಲಿ ನಾವು ನಮ್ಮ ಸಮಸ್ಯೆಗಳನ್ನು ಚರ್ಚೆಯಿಂದಲೇ ಬಗೆಹರಿಸಿಕೊಳ್ಳಬೇಕು. ಮತ್ತು ಚರ್ಚೆಗೆ ಮಹತ್ವ ಬರಬೇಕು. ಇಲ್ಲೊಂದು ಸುವರ್ಣ ಸೌಧ ನಿರ್ಮಿಸುತ್ತಿದ್ದು, ಮುಂದಿನ ವರ್ಷ ಅಲ್ಲಿಯೇ ಅಧಿವೇಶನ ನಡೆಸಬೇಕೆಂದು ತಾವು ತೀರ್ಮಾನಿಸಿದ್ದೀರಿ. ಆದರೆ, ಸಮಾರಂಭ ನಾಳೆ ಎಂದು ನಮಗೆ ಹೇಳಿ ನಾಳೆ ದಿವಸ ಚೆನ್ನಾಗಿಲ್ಲವೆಂದು ತರಾತುರಿಯಲ್ಲಿ ಇವತ್ತೇ ನೀವು, ಮುಖ್ಯಮಂತ್ರಿಗಳು ಮತ್ತು ಸಭಾಪತಿಯವರಾದ ವೀರಣ್ಣ ಮತ್ತಿಕಟ್ಟಿಯವರು ಹೋಗಿ. .

ಅಧ್ಯಕ್ಷರು :- ನಾವೇನೂ ಹೋಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಹೋಗಿರುವುದಕ್ಕೆ ನಾನು ಹೇಳುತ್ತಿಲ್ಲ. ನಮ್ಮ ಮಾತುಗಳನ್ನು ಹೇಳುವುದಕ್ಕೂ ಸಾಕಷ್ಟು ಅವಕಾಶವಿದೆ. ಅದಕ್ಕೋಸ್ಕರ, ಇವತ್ತೇ important ಎಂದು ತಿಳಿದು ಅಲ್ಲಿಗೆ ಹೋಗಿ ಪೂಜೆ ಮಾಡಿ, ಅಡಿಗಲ್ಲು ಹಾಕಿ ನಾಳೆ ಸಮಾರಂಭ ಮಾಡುತ್ತೀರಾ? ಇದು ನಮ್ಮೆಲ್ಲರಿಗೂ ನಾಚಿಕೆಯಾಗುತ್ತದೆ. ನಾವು ಪ್ರಜಾಪ್ರಭುತ್ವದಲ್ಲಿದ್ದೇವೆಯೇ? ಅಥವಾ ಬೇರೆ ಯಾವುದಾದರೂ ಪದ್ಧತಿಯನ್ನು ಅನುಸರಿಸುತ್ತಿದ್ದೇವೆಯೇ? precedents, customs, usages ಅಥವಾ ಪ್ರಜಾಪ್ರಭುತ್ವದಲ್ಲಿರುವ rules and regulationsಗೆ ಬೆಲೆ ಇದೆಯೇ? ಇಲ್ಲವೇ? ನಿಜವಾಗಿಯೂ ಇದು ನಮಗೆಲ್ಲರಿಗೂ ನಾಚಿಕೆ ತರುವಂಥಾದ್ದಾಗಿದೆ.